**(ದಿಃ06.07.2026 ರ ಮಧ್ಯಂತರ ಅರ್ಜಿ ಸಂಖ್ಯೆ 21 ರಿಂದ 23 ರ ಮೇಲೆ ಆದ ಆದೇಶದ ಅನ್ವಯ)**

**ಸಾಕ್ಷಿಗೆ ದಿನಾಂಕಃ20-07-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.CSS ವಕೀಲರಿಂದ ::**

ನಾನು ಹಾಜರುಪಡಿಸಿರುವ ನಿಪಿ11 ದಾಖಲಾತಿಯು ನನ್ನ ಬಳಿ ದಾವೆ ಹೂಡುವ ಸಮಯದಲ್ಲಿ ಇತ್ತು. ಸದರಿ ದಾಖಲೆಯನ್ನು ಹಿಂದೆ ಹಾಜರುಪಡಿಸಲು ನನಗೆ ತೊಂದರೆ ಇತ್ತೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದನ್ನು ಹಿಂದೆ ನನ್ನ ವಕೀಲರಿಗೆ ನೀಡಿದ್ದೆ ಎಂದು ನುಡಿಯುತ್ತಾರೆ. ನಿಪಿ13 ರಿಂದ 15 ದಾಖಲೆಗಳು ಈ ದಾವೆ ಹೂಡಿದ ನಂತರದಲ್ಲಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ. ನಿಪಿ20 ಆದೇಶದ ಪೂರ್ವದಲ್ಲಿ ನನ್ನ ತಂದೆ ಅವರ ಜೀವಿತಾ ಅವಧಿಯಲ್ಲಿ ಎಸಿ ನ್ಯಾಯಾಲಯಕ್ಕೆ ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆಯೇ ಮತ್ತೊಂದು ಪ್ರಕರಣ ಹೂಡಿದ್ದರು ಎಂದರೆ ಸರಿ. ಸದರಿ ಹಿಂದಿನ ಪ್ರಕರಣವು ನಿಪಿ10 ರಂತೆ ಇರುತ್ತದೆ ಎಂದರೆ ಸರಿ. ನಿಪಿ10 ರ ಆದೇಶದ ಬಗ್ಗೆ ನಿಪಿ20 ರ ಪ್ರಕರಣದಲ್ಲಿ ನನ್ನ ಪ್ರಕಾರ ಹೇಳಿರುತ್ತೇವೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ.

ನಿಪಿ20 ರಲ್ಲಿ ನಿಪಿ10 ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ20 ರಲ್ಲಿ ಸಹ ನನ್ನ ತಂದೆಯ ಹೆಸರಿನಲ್ಲಿ ಖಾತೆ ಮಾಡಲು ಆದೇಶ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆದರೆ ಈ ದಾವೆ ಮುಗಿಯವವರೆಗೂ ಸ್ವತ್ತಿನ ಮೂಲ ಮಾಲೀಕರಾದ ಬಸಪ್ಪ ರವರ ಹೆಸರಿನಲ್ಲಿ ಖಾತೆ ಮಾಡುವಂತೆ ಆದೇಶ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಸಪ್ಪ ರವರು ಅಜ್ಜಂಪುರದವರಾಗಿದ್ದು 30-40 ವರ್ಷಗಳ ಹಿಂದೆ ಮೃತರಾಗಿರಬಹುದು ನಿಖರವಾಗಿ ಗೊತ್ತಿಲ್ಲ. ಬಸಪ್ಪನ ವಾರಸುದಾರರಲ್ಲಿ 2-3 ಜನ ಊರಿನಲ್ಲಿ ಇರಬಹುದು. ನನಗೆ ನಿಖರವಾಗಿ ಗೊತ್ತಿಲ್ಲ. ಸದರಿ ಬಸಪ್ಪನ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ.

ನಿಪಿ20 ಕ್ಕೂ ಸರ್ವೇ ನಂಬರ್ 49/4 ಮತ್ತು 49/5 ಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 49/4 ಮತ್ತು 49/5 ಗಳಿಗೆ

ಸಂಬಂಧಪಟ್ಟಂತೆ ಆಗಿರುವ ಸರ್ವೇಯನ್ನು ಇಲ್ಲಿಯವರೆಗೂ ನಾನು ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ11 ರಿಂದ 23 ಕ್ಕೂ ಹಾಗೂ ದಾವಾ ಸರ್ವೇ ನಂಬರ್ ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-
(ರಾಹುಲ್ ಶೆಟ್ಟಿಗಾರ್)
ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ತರೀಕೆರೆ.

ಸಾಕ್ಷಿಯ ಸಹಿ: